or order is inconsistent and if the proposal or the resolution or the order has been considered and passed by the Taluk Panchayat or the committee or the Adhyaksha before such advice is tendered, the Executive Officer may re-submit the proposal or resolution or order which he has advised after such examination and considered necessary. He may forward it to the Chief Executive Officer under the intimation to the Adhyaksha.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೇ, ಇಲ್ಲಿ ತಾಲ್ಲೂಕು ಪಂಚಾಯಿತಿಯ ಕಾನೂನು ಬದ್ಧವಾದಂತಹ ರೆಸಲ್ಯೂಷನ್ ಅನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ತಿರಸ್ಕಾರ ಮಾಡಬಹುದೇ? ಒಂದು ವೇಳೆ ತಿರಸ್ಕಾರ ಮಾಡಿದರೆ ಅದಕ್ಕೆ ಪನಿಷ್‌ಮೆಂಟ್ ಏನು ಎಂಬ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ರೆಸಲ್ಯೂಷನ್ ತಪ್ಪಾದರೆ ಏನು ಮಾಡಬೇಕು ಎನ್ನುವುದರ ಬಗ್ಗೆ ಇಲ್ಲಿ ಮಾನ್ಯ ಮಂತ್ರಿಗಳು ವಿವರಣೆ ಕೊಟ್ಟಿದ್ದಾರೆ. ಬಹುಶಃ ಅದು ತಪ್ಪಾಗಿದೆ. ಕಾನೂನು ಬದ್ಧವಾಗಿರತಕ್ಕಂತಹ ರೆಸಲ್ಯೂಷನ್ ಅನ್ನು ಎಗ್ಸಿಕ್ಯೂಷನ್ ಮಾಡುವುದರಲ್ಲಿ ತಪ್ಪಿತಸ್ಥನಾದರೆ ಕಾರ್ಯನಿರ್ವಾಹಣ ಅಧಿಕಾರಿಗೆ ಏನು ಪನಿಷ್‌ಮೆಂಟ್ ಕೊಡಬಹುದು ಎಂಬುದು ಮಾನ್ಯ ಸದಸ್ಯರ ಮೂಲಭೂತವಾದಂತಹ ಪ್ರಶ್ನೆಯಾಗಿದೆ. ಅದಕ್ಕೆ ಮಾನ್ಯ ಮಂತ್ರಿಗಳು ಸಮಂಜಸವಾದ ಉತ್ತರವನ್ನು ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಈಗಿರತಕ್ಕಂತಹ ಕಾನೂನಿನ ಪ್ರಕಾರ ಎಗ್ಸಿಕ್ಯುಟಿವ್ ಆಫೀಸರ್‌ಗೆ ಏನಾದರೂ ತಪ್ಪಾಗಿದೆ, ಕಾನೂನು ವಿರುದ್ಧವಾಗಿ ಈ ಕೆಲಸ ನಡೆದಿದೆ ಎಂದು ಅನ್ನಿಸಿದರೆ, ಅದನ್ನು ಅಧ್ಯಕ್ಷರಿಗೆ ತಿಳಿಸುವುದು ಅವರ ಜವಾಬ್ದಾರಿಯಾಗಿದೆ ಅವರು ಸರಿಪಡಿಸಿಕೊಂಡರೆ ಸರಿ, ಇಲ್ಲದಿದ್ದರೆ ಚೀಫ್ ಎಗ್ಸಿಕ್ಯೂಟಿವ್ ಆಫೀಸರ್‌ಗೆ ಅವರು ಕಾನೂನಿಗೆ ತದ್ವಿರುದ್ಧವಾದಂತಹದ್ದು ನಡೆಯುತ್ತಿದೆ ಎಂದು ರಿಪೋರ್ಟ್ ಮಾಡಬೇಕಾಗುತ್ತದೆ. ಇದು ಪಂಚಾಯಿತಿ ಮಟ್ಟಕ್ಕೆ ಅನ್ವಯಿಸುತ್ತದೆ. ಜಿಲ್ಲಾ ಮಟ್ಟದಲ್ಲಿ ಅಂತಹದ್ದೇ ತಪ್ಪಾದರೆ ಆ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಆ ಬಗ್ಗೆ ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ. ಸರ್ಕಾರ ಇದರ ಬಗ್ಗೆ 15 ದಿನಗಳಲ್ಲಿ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕಾಗುತ್ತದೆ. ಇಲ್ಲದಿದ್ದರೆ ಏನು ರೆಸಲ್ಯೂಷನ್ ಅನ್ನು ಮಾಡಿರುತ್ತಾರೋ ಅದು ಅನುಷ್ಠಾನಕ್ಕೆ ಬರುತ್ತದೆ.

**1994ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರಾಥಮಿಕ ಶಾಲೆಗೆ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ**

1129 - ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರಾಥಮಿಕ 1ನೇ ತರಗತಿಗೆ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? 2 ರಿಂದ 7ನೇ ತರಗತಿಯಲ್ಲಿದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? (ಸರ್ಕಾರಿ ಹಾಗೂ ಖಾಸಗಿ ಪ್ರತ್ಯೇಕ ಮಾಹಿತಿ ನೀಡುವುದು)*

ಅ) 1993-94ನೇ ಸಾಲಿನಲ್ಲಿ ಆರಂಭಗೊಂಡು ಕಳೆದ 5 ವರ್ಷಗಳಲ್ಲಿ ಹೊಸದಾಗಿ ಪ್ರಾಥಮಿಕ ಶಾಲೆಗೆ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? (ಸರ್ಕಾರಿ ಹಾಗೂ ಖಾಸಗಿ ಪ್ರತ್ಯೇಕ ಮಾಹಿತಿ ನೀಡುವುದು)

ಇ) ಕಳೆದ 5 ವರ್ಷಗಳಲ್ಲಿ ಸುಮಾರು 70 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಿ ಭರ್ತಿ ಮಾಡಿರುವುದು ನಿಜವೇ? ಈ ಅವಧಿಯಲ್ಲಿ ಖಾಸಗಿ ಶಾಲೆಗಳಲ್ಲಿ ಎಷ್ಟು ಶಿಕ್ಷಕರನ್ನು ನೇಮಕ ಮಾಡಲಾಗಿದೆ?

ಈ) ಸರ್ಕಾರಿ ಶಾಲೆಗಳಲ್ಲಿ ನೇಮಕ ಮಾಡಿರುವ ಶಿಕ್ಷಕರ ವೇತನಕ್ಕಾಗಿ ಮಾಸಿಕ ಖರ್ಚಾಗುತ್ತಿರುವ ಹಣ ಎಷ್ಟು? ಅದನ್ನು ಯಾವ ಶೀರ್ಷಿಕೆಯಿಂದ ಭರಿಸಲಾಗುತ್ತಿದೆ (ಯೋಜನೆ-ಯೋಜನೇತರ ಸ್ಪಷ್ಟ ಪಡಿಸುವುದು)

ಉ) ವಿದ್ಯಾರ್ಥಿ/ಶಿಕ್ಷಕರ ಯಾವ ಪ್ರಮಾಣದ (ರೇಶಿಯೋ) ಮಾನದಂಡದ ಮೇಲೆ ಈ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ)

| | | ಸರ್ಕಾರಿ | ಖಾಸಗಿ |
|---|---|---|---|
| ಎ) | 1993-94ನೇ ಸಾಲಿನಲ್ಲಿ ಪ್ರಾಥಮಿಕ 1ನೇ ತರಗತಿಗೆ ದಾಖಲಾದ ಮಕ್ಕಳ ಸಂಖ್ಯೆ | 12,34,503 | 2,90,082 |
| ಬಿ) | 1993-94ನೇ ಸಾಲಿನಲ್ಲಿ ಪ್ರಾಥಮಿಕ 2 ರಿಂದ 7ನೇ ತರಗತಿವರೆಗೆ ಓದುತ್ತಿದ್ದ ಮಕ್ಕಳ ಸಂಖ್ಯೆ | 47,95,396 | 14,51,715 |

ಆ)

| ವರ್ಷ | ಸರ್ಕಾರಿ | ಖಾಸಗಿ |
|---|---|---|
| 1993-94 | 12,34,503 | 2,90,082 |
| 1994-95 | 12,15,361 | 3,05,166 |
| 1995-96 | 12,48,642 | 3,27,803 |
| 1996-97 | 12,05,091 | 3,19,862 |
| 1997-98 | 12,60,431 | 3,50,773 |

ಇ) ಹೌದು. ಕಳೆದ 5 ವರ್ಷಗಳಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು 84,531 ಶಿಕ್ಷಕರನ್ನು ನೇಮಕ ಮಾಡಲಾಗಿದೆ.

ಖಾಸಗಿ ಶಾಲೆಗಳ ಶಿಕ್ಷಕರ ನೇಮಕಾತಿಯನ್ನು ಸಂಬಂಧಪಟ್ಟ ಆಡಳಿತ ಮಂಡಳಿಗಳೇ ಮಾಡುವರು ಹಾಗಾಗಿ ಸದರಿ ವಿವರವನ್ನು ಅವರಿಂದ ಪಡೆಯಬೇಕಾಗಿರುವುದರಿಂದ ಸಧ್ಯಕ್ಕೆ ಲಭ್ಯವಿರುವುದಿಲ್ಲ.

ಈ) ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೇತನಕ್ಕಾಗಿ ಮಾಸಿಕ ಖರ್ಚಾಗುವ ಹಣದ ವಿವರ ಹೀಗಿದೆ.

| | ಲೆಕ್ಕ ಶೀರ್ಷಿಕೆ | ಮಾಸಿಕ ಖರ್ಚು | |
|---|---|---|---|
| | | ಯೋಜನೆ | ಯೋಜನೇತರ |
| 1. | 2202-01-101-0-71-<br>ಸರ್ಕಾರಿ ಪ್ರಾ. ಶಾಲೆಗಳು | 1072.83 | 8564.89 |
| 2. | 2202-01-106-0-71-<br>ಶಾಲಾ ಮಾತೆಯರು | 1.25 | 188.31 |
| 3. | 2202-01-191-1-03<br>ಕಪ್ಪು ಹಲಗೆ ಯೋಜನೆ | 585.70 | |
| | **ಒಟ್ಟು** | **1659.78** | **8753.20** |

ಉ) ವಿದ್ಯಾರ್ಥಿ/ಶಿಕ್ಷಕರ ಅನುಪಾತ 40:1ರಂತೆ.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ 1994ರಿಂದ ಇದುವರೆಗೆ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು 84 ಸಾವಿರ ಶಿಕ್ಷಕರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಈಗ ತರಬೇತಿ ಪಡೆದಿರುವ ಶಿಕ್ಷಕರ ಸಂಖ್ಯೆ ಎಷ್ಟಿದೆ? ಹಾಗೂ ಪ್ರತಿ ವರ್ಷ ಸರ್ಕಾರ ಎಷ್ಟು ಶಿಕ್ಷಕರನ್ನು ನೇಮಕಾತಿ ಮಾಡುವಂತಹ ಅವಶ್ಯಕತೆ ಇದೆ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎಷ್ಟು ಜನ ಈಗ ನಿರುದ್ಯೋಗಿ ಶಿಕ್ಷಕರು ಇದ್ದಾರೆಂದು ಕೇಳುತ್ತಿದ್ದಾರೆ. ಈಗ ರಾಜ್ಯದಲ್ಲಿ ಒಟ್ಟು ಟಿ.ಸಿ.ಹೆಚ್. ಆಗಿ ಉದ್ಯೋಗಕ್ಕಾಗಿ ಸುಮಾರು 70 ಸಾವಿರಕ್ಕೂ ಮಿಕ್ಕಿ ಅಭ್ಯರ್ಥಿಗಳು ಕಾಯುತ್ತಿದ್ದಾರೆ. ಪ್ರತಿ ವರ್ಷ ಕೂಡ 7,717 ಜನರನ್ನು ನಾವು ಶಿಕ್ಷಕರ ತರಬೇತಿಯನ್ನು ಕೊಟ್ಟು ಕಳುಹಿಸುತ್ತಿದ್ದೇನೆ. ಕಳೆದ ಐದು ವರ್ಷಗಳಲ್ಲಿ ಸುಮಾರು 85 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದೇವೆ. ಪ್ರೈಮರಿ ಎಜ್ಯುಕೇಷನ್‌ಗೆ ನಾವು ಒಂದು ತಿಂಗಳಿಗೆ 104 ಕೋಟಿ ರೂಪಾಯಿಗಳನ್ನು ಶಿಕ್ಷಕರ ಸಂಬಳಕ್ಕಾಗಿ ವಿನಿಯೋಗಿಸುತ್ತಿದ್ದೇನೆ.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೇ, ಸುಮಾರು 70 ಸಾವಿರ ಟಿ.ಸಿ.ಹೆಚ್. ಮುಗಿಸಿದವರು ಉದ್ಯೋಗಕ್ಕಾಗಿ ತಮ್ಮ ಹೆಸರನ್ನು ನೋಂದಾಯಿಸಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ರೀತಿ ತರಬೇತಿ ಮುಗಿಸಿದ 70 ಸಾವಿರ ಅಭ್ಯರ್ಥಿಗಳಿದ್ದಾಗ ಹೊಸದಾಗಿ ತರಬೇತಿ ಪಡೆಯುವ ಅಭ್ಯರ್ಥಿಗಳ ಭವಿಷ್ಯ ಏನಾಗುತ್ತದೆ? 134 ಟಿಸಿಹೆಚ್ ತರಬೇತಿ ಸಂಸ್ಥೆಗಳಿವೆ ಎಂದು ದಾಖಲೆಗಳಲ್ಲಿದೆ. ಇಷ್ಟೊಂದು ತರಬೇತಿ ಸಂಸ್ಥೆಗಳ ಅಗತ್ಯ ಇದೆಯೇ? ಇಷ್ಟೊಂದು ತರಬೇತಿ ಸಂಸ್ಥೆಗಳಿಂದ ಪ್ರತಿ ವರ್ಷ ತರಬೇತಿ ಪಡೆದು ಹೊರ ಬರತಕ್ಕಂತಹ ಶಿಕ್ಷಕರುಗಳಿಗೆ ಉದ್ಯೋಗಾವಕಾಶ ಸಿಗುತ್ತದೆಯೇ?

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಸರ್ಕಾರದಲ್ಲಿ ನಾವು ತೀರ್ಮಾನ ತೆಗೆದುಕೊಂಡ ಪ್ರಕಾರ 2001ನೇ ಇಸವಿಯವರೆಗೂ ಕೂಡ ಹೊಸದಾಗಿ ಯಾವುದೇ ಶಿಕ್ಷಕರ ತರಬೇತಿ ಕಾಲೇಜುಗಳನ್ನು ತೆರೆಯಲು ಅನುಮತಿ ನೀಡುವುದಿಲ್ಲ.

ಶ್ರೀ ದಿನೇಶ್ ಗುಂಡೂರಾವ್ : ಈಗಿರುವ ಶಿಕ್ಷಕರ ಭವಿಷ್ಯದ ಪ್ರಶ್ನೆ ಕೂಡ ಈಗ ಬರುತ್ತದೆ. ಪ್ರತಿ ವರ್ಷ 7-8 ಸಾವಿರ ಶಿಕ್ಷಕರು ತರಬೇತಿ ಪಡೆದು ಆಚೆಗೆ ಬರುತ್ತಿದ್ದಾರೆ. ತಾವು ಹೇಳಿದಂತೆ ಈಗಾಗಲೇ 70 ಸಾವಿರ ಶಿಕ್ಷಕರ ತರಬೇತಿ ಮುಗಿಸಿದವರು ಉದ್ಯೋಗಕ್ಕಾಗಿ ನೋಂದಾಯಿಸಿ ಕೊಂಡಿದ್ದಾರೆ. ಇವರ ಒಂದು ಉದ್ಯೋಗದ ವ್ಯವಸ್ಥೆಯಲ್ಲಿ ಬಹಳ ಕಷ್ಟವಾಗುತ್ತಾ ಇರುವಂತಹ ಸಂದರ್ಭದಲ್ಲಿ ತಾವು ಮುಂದಿನ ವರ್ಷಕ್ಕೆ ಕಾಯದೇ ತರಬೇತಿ ಕೊಡತಕ್ಕ ಸಂಸ್ಥೆಗಳನ್ನು ತೆರೆಯಲು ಅನುಮತಿಯನ್ನು ಈ ವರ್ಷದಿಂದಲೇ ನಿಲ್ಲಿಸಿದರೆ, ಬಹುಶಃ ಒಳ್ಳೆಯದಾಗುತ್ತದೆ ಎಂದು ನನಗನಿಸುತ್ತಿದೆ.

ಶ್ರೀ ಹೆಚ್. ವಿಶ್ವನಾಥ್ : ಪ್ರತಿ ವರ್ಷವೂ ಕೂಡ ನಾವು ನಿವೃತ್ತಿಯಾದಂತಹವರ ಜಾಗದಲ್ಲಿ ತರಬೇತಿ ಪಡೆದ ಶಿಕ್ಷಕರನ್ನು ತುಂಬುತ್ತಾ ಹೋಗುತ್ತೇವೆ. ಅದರ ಜೊತೆಗೆ ಅಗತ್ಯತೆಯನ್ನು ನೋಡಿಕೊಂಡು ನಾವು ಆ ಶಿಕ್ಷಕರನ್ನು ತುಂಬುತ್ತಾ ಹೋಗುವ ಕಾರ್ಯ ನಡೆಯುತ್ತಲೇ ಇರುತ್ತದೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು

## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳ 8ನೇ ಪಟ್ಟಿಯಲ್ಲಿರುವ ಒಟ್ಟು 112 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

### ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಕಾಲೇಜುಗಳು

942 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ತರಗತಿಗಳನ್ನು ನಡೆಸದೆ ಸರ್ಕಾರದಿಂದ ಅನುದಾನ ಮುಂತಾದ ಸೌಲಭ್ಯಗಳನ್ನು ಪಡೆಯುತ್ತಿರುವ ಕಾಲೇಜುಗಳನ್ನು ಸರ್ಕಾರ ಗುರುತಿಸಿದೆಯೆ?*

ಆ) *ಹಾಗಿದ್ದಲ್ಲಿ ಒಟ್ಟು ಕಾಲೇಜುಗಳನ್ನು ಗುರುತಿಸಲಾಗಿದೆಯೇ? ಜಿಲ್ಲಾವಾರು ಕಾಲೇಜುಗಳ ವಿವರಗಳನ್ನು ನೀಡುವುದು?*

ಇ) *ಇದುವರೆಗೂ ಈ ಕಾಲೇಜುಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?*

ಡಾ ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) ಅಂತಹ ಕಾಲೇಜುಗಳಿಲ್ಲ.